ಗ್ರಾಮೀಣ ರಸ್ತೆಗಳ ಸುಧಾರಣೆ

1042 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗ್ರಾಮೀಣ ರಸ್ತೆಗಳ ಸುಧಾರಣೆಗೆ ಸರ್ಕಾರವು ಕೈಗೊಂಡ ಕ್ರಮಗಳೇನು;*

ಆ) *ಈ ರಸ್ತೆಗಳ ಸುಧಾರಣೆಗಾಗಿ 900 ಕೋಟಿ ರೂಪಾಯಿ ಆರ್ಥಿಕ ನೆರವು ನೀಡಲು ವಿಶ್ವ ಬ್ಯಾಂಕ್ ಒಪ್ಪಿರುವುದು ನಿಜವೇ, ವಿಶ್ವಬ್ಯಾಂಕ್ ಸದರಿ ಹಣವನ್ನು ಯಾವಾಗ ಬಿಡುಗಡೆ ಮಾಡುವುದು,ಹಾಗೂ ಯಾವ ಯಾವ ರಸ್ತೆಗಳ ಸುಧಾರಣೆಗಾಗಿ ಈ ಹಣವನ್ನು ಉಪಯೋಗಿಸಲಾಗುವುದು.(ವಿವರಿಗಳನ್ನು ಒದಗಿಸುವುದು)*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಗಳನ್ನು ನಬಾರ್ಡ್ ಸಾಲ ನೆರವಿನ ಅಡಿಯಲ್ಲಿ ಅಭಿವೃದ್ಧಿಪಡಿಸಲು ಪ್ರಸ್ತಾವಿಸಲಾಗಿದ್ದು, ಇದುವರೆವಿಗೂ 122.00 ಕೋಟಿ ರೂ.ಗಳ ಮೊತ್ತದ ಸಾಲ ಸಹಾಯ ಒಪ್ಪಿತವಾಗಿದೆ.

ಆ) ವಿಶ್ವ ಬ್ಯಾಂಕ್‌ನಿಂದ 900.00 ಕೋಟಿ ರೂ. ಗಳ ಆರ್ಥಿಕ ಸಾಲ ನೆರವನ್ನು ರಾಜ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಪ್ರಸ್ತಾವಿಸಲಾಗಿದೆ. ಹಾಗೂ ಈ ಬಗ್ಗೆ ಕಾರ್ಯ ತಂತ್ರ ಆಯ್ಕೆ ಅಧ್ಯಯನವನ್ನು ಆಧರಿಸಿ, ಆದ್ಯತೆಪಡಿಸುವ ಪ್ರಸ್ತಾವನೆಗಳನ್ನು ಸಾಲ ಲಭ್ಯತೆಗನುಗುಣವಾಗಿ ಪರಿಶೀಲಿಸಿ ಗುರುತುಪಡಿಸಲಾಗುವುದು.

1996-97ನೇ ಸಾಲಿನಲ್ಲಿ ನಬಾರ್ಡ್ ಸಂಸ್ಥೆಯಿಂದ ಲೋಕೋಪಯೋಗಿ ಇಲಾಖೆಗೆ ಬಿಡುಗಡೆಯಾದ ಹಣ.

1043 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ನಬಾರ್ಡ್ ಸಂಸ್ಥೆಯಿಂದ ಲೋಕೋಪಯೋಗಿ ಇಲಾಖೆಯ ವಿವಿಧ ಯೋಜನೆಗಳಿಗೆ ಒಟ್ಟು ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ; ಅದರಲ್ಲಿ ಬಿಡುಗಡೆ ಆದ ಹಣ ಎಷ್ಟು ಮತ್ತು ಖರ್ಚು ಮಾಡಿದ ಹಣ ಎಷ್ಟು; ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಖರ್ಚು ಮಾಡಿಲಾಗಿದೆ; ಸದರಿ ಕಾಮಗಾರಿಗಳು ಯಾವುವು; (ವಿವರಗಳನ್ನು ಒದಗಿಸುವುದು)*

ಆ) *1997-98ನೇ ಸಾಲಿನಲ್ಲಿ ನಬಾರ್ಡ್ ಸಂಸ್ಥೆ ಎಷ್ಟು ಹಣ ಮಂಜೂರು ಮಾಡುವುದು ಮತ್ತು ಆದರ ಹಣವನ್ನು ಯಾವ ಯಾವ ಕಾಮಗಾರಿಗೆಳಿಗೆ ಉಪಯೋಗಿಸಲಾಗುವುದು; (ವಿವರ ನೀಡುವುದು)*